

ಅಣ್ಣ ಬಂದು ಆಸ್ಪತ್ರೆಗೆ ಕರೆದುಕೊಂಡು ಹೋಗೋಣವೆಂದರೆ ಪೊಲೀಸರು ಹಿಡಿದುಕೊಳ್ಳುತ್ತಾರೆ. ಓಡಿಹೋಗೋಣವೆಂದರೆ ಹೀಗಾಗಿರುವುದು ತಮ್ಮನಿಗೆ... ಹೇಗೆ?... ನಾಗರಾಜನಿಗೆ ಫೋನ್ ಮಾಡಿದನಂತೆ. ಇಬ್ಬರೂ ಸೇರಿ ಆಸ್ಪತ್ರೆಗೆ ಕರೆದೊಯ್ದೆವು. ಆ ದಿನ ಬೆಳಗಿನಜಾವವೇ ಈ ಮುಂ.. ಮಕ್ಕಳು ತಮ್ಮನನ್ನು ಸಾಯಿಸಿದರು. ಶವ ಕೂಡಾ ಕೈಗೆ ಸಿಗದಂತೆ ಮಾಡಿದರು'' ಇನ್ನೊಬ್ಬ ವ್ಯಕ್ತಿ ಕಣ್ಣೀರು ಹಾಕುತ್ತ ನೆನಪಿಸಿಕೊಂಡ.

''ಅವರು ಶ್ರೀಲಂಕದವರು. ಅಣ್ಣತಮ್ಮಂದಿರೇ. ಹಿಡಿ ಅಕ್ಕಿಗಾಗಿ ವ್ಯಕ್ತಿಯನ್ನು ಸಾಯಿಸಿದರು. ಭಯದಿಂದ ಮಸ್ಕಟ್‌ಗೆ ಓಡಿಹೋಗೋಣವೆಂದು ನೋಡಿದರು. ಆದರೆ ಮಾಡಿದ ಪಾಪ ಎಲ್ಲಿಹೋಗುತ್ತದೆ... ಬಾರ್ಡರಿನಲ್ಲಿ ಪೊಲೀಸರಿಗೆ ಸಿಕ್ಕಿಹಾಕಿಕೊಂಡರಂತೆ...'' ಇನ್ನೊಬ್ಬ ಹೇಳಿದ.

ಸಾವಿತ್ರಿ ನೋವಿನಿಂದ ನೋಡಿದಳು. ಬಿಕ್ಕಿ ಬಿಕ್ಕಿ ಅಳಬೇಕೆಂದು ಮತ್ತೊಮ್ಮೆ ಪ್ರಯತ್ನಿಸಿದಳು. ಅಳು ಬರಲಿಲ್ಲ. ಮಗನ ಕುರಿತು ಈಗ ಹೊಸ ವಿಷಯಗಳನ್ನು ಕೇಳುತ್ತಿದ್ದಾಳೆ. ಕೆಲವು ದಿನ ಕಾಣಿಸುತ್ತಿಲ್ಲವೆಂದು ಹೇಳಿದರು. ನಂತರ ಯಾರೋ ಕೊಲೆ ಮಾಡಿ ಶವವನ್ನು ಮಾಯ ಮಾಡಿದರೆಂದರು. ಕೊಲೆ ಮಾಡಿದವರಿಗೆ ಶಿಕ್ಷೆ ಆಯಿತೆಂದು ಹೇಳಿದರು. ಮಗನಿಗಾಗಿ ಎರಡು ವರ್ಷ ಅತ್ತಿದ್ದಳು.